ಡಿಡಬ್ಲ್ಯೂಃ 2

ಇಂದು ದಿನಾಂಕಃ 20.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ. ಆರ್.ಸಿ.ಎಸ್. ವಕೀಲರಿಂದಃ

1. ನನ್ನ ಜನ್ಮ ದಿನಾಂಕ ಗೊತ್ತಿಲ್ಲ. ನನಗೆ ಸುಮಾರು 32 ವರ್ಷಗಳು. ಮೂಲ ಪುರುಷ ಮಲ್ಲೇಶಪ್ಪರವರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ದಾವಾ ಆಸ್ತಿಯು ಮೂಲ ಪುರುಷ ಮಲ್ಲೇಶಪ್ಪ ಹಾಗೂ ವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಮಲ್ಲೇಶಪ್ಪ ಹಾಗೂ ವಾದಿಯರ ಮಧ್ಯೆ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ ಸರಿ. 2 ಮತ್ತು 3 ನೇ ವಾದಿಯರ ಮದುವೆ ಯಾವ ಇಸವಿಯಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಮದುವೆ ಆಗಿರುತ್ತದೆ ಎಂದು ಗೊತ್ತಿದೆ ಎಂದು ನುಡಿಯುತ್ತಾರೆ.

2. ಮೂಲ ಪುರುಷ ಮಲ್ಲೇಶಪ್ಪ ಮಧ್ಯೆ ವ್ಯಸನಿ ಇದ್ದರು ಎಂದರೆ ಸರಿಯಲ್ಲ. ವಾದಿಯರ ಮನೆತನ ಚೆನ್ನಾಗಿತ್ತು ಎಂದರೆ ಸರಿ. ಮೂಲ ಪುರುಷ ಮಧ್ಯೆ ವ್ಯಸನಿ ಇರುವುದರಿಂದ ಅವರ ಮನೆತನಕ್ಕೆ ಯಾವುದೇ ಹಣದ ಅವಶ್ಯಕತೆ ಇದ್ದಿರಲಿಲ್ಲ, 2 ನೇ ಪ್ರತಿವಾದಿ ಖೊಟ್ಟಿ ನಿಡಿ-2 ನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಮಕ್ಕಳು ಮದುವೆ ಸಂಬಂಧ ಎಂದು ಸುಳ್ಳು ಬರೆಯಿಸಿ ಖೊಟ್ಟಿ ಖರೀದಿ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ಖರೀದಿ ಕಾಲಕ್ಕೆ ಮೂಲ ಪುರುಷನ ಮಕ್ಕಳ ಮದುವೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಮಲ್ಲೇಶಪ್ಪರಿಗೆ ದಾವಾ ಆಸ್ತಿ ಖರೀದಿ ಕೊಡಲು ಯಾವುದೇ ಸ್ವತಂತ್ರ್ಯ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-2 ರ ಪ್ರಕಾರ ನಮ್ಮ ತಂದೆಗೆ ಯಾವುದೇ ಹಕ್ಕು ಬಂದಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ ದಾವಾ ಆಸ್ತಿಯ ವಹಿವಾಟು ಮಾಡಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು 2001 ರಿಂದ ಇಲ್ಲಿಯರವರೆಗೆ ನಾವೇ ವಹಿವಾಟಿನಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. 2001 ರಿಂದ ನಾವೇ ವಹಿವಾಟಿನಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-12 ಮತ್ತು 13 ಗಳನ್ನು ದಾವೆಗೆ ಅನುಕೂಲವಾಗಲೀ ಎಂದು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಡಿ-12 ಮತ್ತು 13 ಗಳನ್ನು ಮೂಲ ಪುರುಷ ಮಲ್ಲೇಶಪ್ಪ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ನಿಡಿ-13 ರ ಪ್ರಕಾರ ದಾವಾ ಆಸ್ತಿಯನ್ನು ಎಂದೂ ಲಾವಣಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-12 ರ ಪ್ರಕಾರ ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ. ಶಂಭು ಲಿಂಗನಗೌಡರ ಎಂದರೆ ಮಲ್ಲೇಶಪ್ಪನ ಸಹೋದರ ಎಂದರೆ ಸಾಕ್ಷಿಯು ಅವರು ಅಣ್ಣತಮ್ಮಂದಿರು ಎಂದು ನುಡಿಯುತ್ತಾರೆ. ನಿಡಿ-14 ಕ್ಕೂ ಹಾಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಡಿ-14 ರಲ್ಲಿ ಮೂಲ ಪುರುಷ ಮಲ್ಲೇಶಪ್ಪನ ಹೆಸರು ಇಲ್ಲ ಎಂದರೆ ಸರಿಯಲ್ಲ. ನಿಡಿ-14 ನ್ನು ಅನಾವಶ್ಯಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

5. ಪ್ರತಿವಾದ ಪತ್ರ ಹಾಗೂ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದಾವೆಗೆ ಅನುಕೂಲವಾಗಲೀ ಎಂದು ಮೂಲ ಪುರುಷನ 2 ನೇ ಹೆಂಡತಿ ನಾಗವ್ವ ಹಾಗೂ ಮಗ ಬಂಗಾರೆಪ್ಪ ಎಂದು ಸುಳ್ಳು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-2 ಕ್ಕೆ ಮೂಲಪುರುಷನ 2 ನೇ ಹೆಂಡತಿ ನಾಗವ್ವ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಹೇಳಿದ ಪ್ರಕಾರ ಮೂಲ ಪುರುಷನಿಗೆ 2 ನೇ ಹೆಂಡತಿ ಹಾಗೂ ಮಗ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೂಲ ಪುರುಷ ಹಾಗೂ ವಾದಿಯರು ವಹಿವಾಟಿನಲ್ಲಿದ್ದರು, ಈಗಲೂ ಸಹ ವಾದಿಯರು ಹಾಗೂ ಪ್ರತಿವಾದಿ 1ರವರು ವಹಿವಾಟಿನಲ್ಲಿದ್ದಾರೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯಲ್ಲಿ ವಾದಿಯರಿಗೆ ಕಾನೂನುಬದ್ಧ ಹಕ್ಕು ಇದೆ ಎಂದರೆ ಸರಿಯಲ್ಲ. ನಿಡಿ-1 ನ್ನು ದಾವೆಗೆ ಅನುಕೂಲವಾಗಲೀ ಎಂದು ನಾವೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಹಕ್ಕಿಲ್ಲದಿದ್ದರೂ ಖೊಟ್ಟಿ ನಿಡಿ-2 ರ ಪ್ರಕಾರ ಹಕ್ಕು ಇದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಪಾಟೀ ಸವಾಲುಃ** ಪ್ರತಿವಾದಿ 1ರವರ ಪರ ಶ್ರೀ. ಎಮ್.ಎನ್.ಎಮ್. ವಕೀಲರಿಂದಃ

1. ದಾವಾ ಆಸ್ತಿ ವಾದಿಯರ ಹಾಗೂ ಪ್ರತಿವಾದಿ 1ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಕಾನೂನುಬದ್ಧ ಹಿಸ್ಸೆ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಖೊಟ್ಟಿ ನಿಡಿ-2 ನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.